# ಕಾಲಚಕ್ರ ಮತ್ತೆ ತಿರುಗುವಂತಿದ್ದರೆ...



■ ರಶ್ಮಿ ಪ್ರಶಾಂತ್

ನೆನಪುಗಳ ಮಾತು ಮಧುರ..... ಹೌದು ಹಳೆಯ ನೆನಪುಗಳು ಎಂದೆಂದಿಗೂ ಮಧುರ! ಅವುಗಳನ್ನು ಮೊಗೆಮೊಗೆದು ಹೆಕ್ಕಿದಷ್ಟು ಮುಗಿಯಲಾರದ ಅಕ್ಷಯ ಪಾತ್ರೆ. ಅದರಲ್ಲೂ ಅಜ್ಜಿ ತಾತನ ಮನೆಯಲ್ಲಿ ಕಳೆದ ಬಾಲ್ಯ, ರಜೆಯ ದಿನಗಳು ಇಂದಿಗೂ ಬಾಡಿದ ಮನಸ್ಸಿಗೆ ಹೊಸ ಹುರುಪನ್ನು ತಂದುಕೊಡುವಂತಹವು.

ಇದೇ ತರಹ ಮನಸ್ಸಿಗೆ ಮುದ ನೀಡುವ ಒಂದು ನೆನಪಿನ ಬುತ್ತಿಯನ್ನು ಬಿಚ್ಚಿಡುವುದೂ ಖುಷಿಕೊಡುತ್ತದೆ. ನಮ್ಮ ತಂದೆಯವರೇ ಮನೆಗೆ ಹಿರಿಮಗ. ಅವರ ನಂತರ ಮೂವರು ತಮ್ಮಂದಿರು ಮತ್ತು ನಾಲ್ಕು ತಂಗಿಯರು. ಎಲ್ಲರೂ ಅವರವರ ಸಂಸಾರದೊಂದಿಗೆ ರಾಜ್ಯದ ವಿವಿಧೆಡೆ ನೆಲೆಯೂರಿದ್ದರು. ನಮ್ಮ ತಾತ ಅಜ್ಜಿ ಕೊನೆಯ ಚಿಕ್ಕಪ್ಪನವರೊಂದಿಗೆ ಶಿವಮೊಗ್ಗೆಯಲ್ಲಿಯಲ್ಲಿದ್ದರು. ಸುಮಾರು 35 ವರ್ಷಗಳ ಹಿಂದೆ ಬೇಸಿಗೆಯ ರಜೆಯಲ್ಲಿ ಎಲ್ಲರೂ 2–3 ದಿನ ಶಿವಮೊಗ್ಗೆಯಲ್ಲಿ ಒಟ್ಟಾಗಿ ಸೇರಿದ್ದೆವು.

ಆ ಸಮಯದಲ್ಲಿ ಕಳೆದ ಒಂದೊಂದು ದಿನವೂ ಸುಂದರ ನೆನಪು. ನಾನು ಬಹುಶಃ 9–10 ವರ್ಷದವಳಿರಬಹುದು. ಆ ರಜೆಯ ಪ್ರತಿಯೊಂದು ಘಟನೆಯೂ ಕರಾರುವಕ್ಕಾಗಿ ನೆನಪಿಲ್ಲದಿದ್ದರೂ ಅಂದು ಕಳೆದ ದಿನಗಳು ಅತ್ಯಂತ ಸಂತಸಮಯವಾಗಿದ್ದವು. ಬಹುಶಃ ನೂರು ವರ್ಷ ಹಳೆಯದಾದ ನಮ್ಮ ತಾತ ಅಜ್ಜಿಯ ಬವಂತಿ ಕಂಬದ ಮನೆಯಲ್ಲಿ ನಾವು ಮಕ್ಕಳು ಸಮಯದ ಪರಿವೆಯೇ ಇಲ್ಲದೆ ಆಡಿದ ಆಟಗಳಿಗೆ ಲೆಕ್ಕ ಉಂಟೇ? ಅರಮನೆಯಂತಹ ಮನೆಯಲ್ಲಿ ಪ್ರತಿಯೊಂದು ಕೋಣೆಗಳಲ್ಲಿ ಇಣುಕಿ, ಏನೋ ಮಹತ್ತರವಾದುದನ್ನು ಕಂಡು ಹಿಡಿದಿದ್ದೇವೇನೋ ಎಂಬಂತೆ ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಹತ್ತಿಳಿಯುವುದೇ ಒಂದು ಮೋಜಿನ ಆಟವಾಗಿತ್ತು. ಉಪ್ಪುಮೂಟೆ, ಕಣ್ಣಾಮುಚ್ಚಾಲೆ, ಚೌಕಭಾರ, ಪಗಡೆ, ಕಳ್ಳ ಪೊಲೀಸ್, ನದಿದಡ, ಜೂಟಾಟ.... ಒಂದೇ ಎರಡೇ? ದೊಡ್ಡವರು ಸಣ್ಣವರು ಎಂಬ ಭೇದವಿಲ್ಲದೆ ಎಲ್ಲರೂ ಸೇರಿ ಒಟ್ಟಿಗೆ ಕೂತು ಕಡ್ಲೆ ಗಿಡ, ಕೆ.ಜಿ. ಗಟ್ಟಲೆ ಅವರೆಕಾಯಿ ಸುಲಿಯುತ್ತಾ ಹರಟೆ, ಮಾತು, ಹಾಡು, ಆಟ ಹೀಗೆ ಪ್ರತಿ ನಿಮಿಷವನ್ನೂ ಆಸ್ವಾದಿಸುತ್ತಿದ್ದೆವು. ಅಡುಗೆ ಮನೆಯಲ್ಲಿ ಅಜ್ಜಿ, ಅಮ್ಮ, ಚಿಕ್ಕಮ್ಮ, ಅತ್ತೆಯಂದಿರು ಸೇರಿ ರುಚಿ ರುಚಿಯಾದ ಅಡುಗೆ ಮಾಡಿ ಪ್ರತಿದಿನ ಹಬ್ಬದೂಟ ಸವಿಯುವಂತೆ ಮಾಡುತ್ತಿದ್ದರು. ರಾತ್ರಿಯ ವೇಳೆ ಅಜ್ಜಿ ಎಲ್ಲರಿಗೂ ಕೈತುತ್ತು ನೀಡುತ್ತಿದ್ದರು. ಮಧ್ಯದಲ್ಲಿ ಅಜ್ಜಿ ಕುಳಿತರೆ ಸುತ್ತಲೂ ಮನೆಯ ಇತರ ಸದಸ್ಯರು. ಪ್ರತಿಯೊಬ್ಬರೂ ಅವರ ಕೈತುತ್ತಿನ ರುಚಿಯ ಸವಿಯನ್ನು ಪಡೆದ ಭಾಗ್ಯವಂತರು.

ಒಂದು ದಿನ ಎಲ್ಲರೂ ಸೇರಿ ಸಮೀಪದ ಗಾಜನೂರಿನ ಡ್ಯಾಮಿಗೆ ಹೋಗಿ ಸಂತೋಷದಿಂದ ಸುತ್ತಾಡಿ ಬಂದೆವು. ಆಗ ತೆಗೆದ ಈ ಫೋಟೊ ಇಂದಿಗೂ ಭದ್ರವಾಗಿ ನನ್ನ ಬಳಿ ಇದೆ. ಇಲ್ಲಿ ನನ್ನ ತಂದೆಯವರ ಮೂವರು ತಮ್ಮಂದಿರು, ಮೂವರು ತಂಗಿಯರು, ಅವರ ಕುಟುಂಬ ಹಾಗೂ ನಾನು, ನನ್ನ ತಂದೆ ತಾಯಿ ಮತ್ತು ಇಬ್ಬರು ಅಕ್ಕಂದಿರು ಇದ್ದೇವೆ. ಇವರಷ್ಟೇ ಅಲ್ಲದೆ ಯಾವುದೋ ಕಾರಣಾಂತರಗಳಿಂದ ಬರಲಾಗದಂತಹ ಹಾಗೂ ಆಗಿನ್ನೂ ನಮ್ಮ ಕುಟುಂಬಕ್ಕೆ ಸೇರ್ಪಡೆ ಆಗದಂತಹ ಕೆಲವು ಸದಸ್ಯರು ಈ ಫೋಟೋದಲ್ಲಿ ಇಲ್ಲ. ಬಹುಶಃ ಅವರೆಲ್ಲರೂ ಇದ್ದಿದ್ದರೆ ಇದಕ್ಕೆ ಇನ್ನಷ್ಟು ಕಳೆ ಕಟ್ಟುತ್ತಿತ್ತೇನೋ!. ಈ ಫೋಟೋದಲ್ಲಿ ಇರುವವರಲ್ಲಿ ಈಗ ಹಲವರು ನಮ್ಮ ಪಾಲಿಗೆ ನೆನಪು ಮಾತ್ರ!

ಈಗ ನಮ್ಮ ತಂದೆಯವರ ವಂಶದ ಸಂತತಿ ಇನ್ನೂ ದೊಡ್ಡದಾಗಿದೆ, ದೇಶ ವಿದೇಶಗಳಲ್ಲಿ ನಮ್ಮವರು ನೆಲೆಯೂರಿದ್ದಾರೆ. ಈಗಿನ ಪೀಳಿಗೆಯವರು ಅವರವರ ಕ್ಷೇತ್ರಗಳಲ್ಲಿ ಬೆಳೆಯುತ್ತಿದ್ದಾರೆ. ಆದರೆ ದೊಡ್ಡವರಿಲ್ಲದ ನೋವು ಕಾಡುತ್ತದೆ. ಜೀವನಶೈಲಿ, ಕಾಲ, ಆತ್ಮೀಯ ಸಂಬಂಧಗಳೂ ಬದಲಾಗಿವೆ. ಮದುವೆ, ಮುಂಜಿ ಎಂದು ಬಂದಾಗ ಸ್ವಲ್ಪ ಸಮಯದ ಮಟ್ಟಿಗೆ ಎಲ್ಲರೂ ಒಂದೆಡೆ ಸೇರುತ್ತೇವೆ. ಆ ಸಮಯದ ಪ್ರತಿ ನಿಮಿಷದ ಸುಖವನ್ನೂ ಆಸ್ವಾದಿಸುತ್ತೇವೆ... ಮತ್ತೆ ಚದುರಿ ಹೋಗುತ್ತೇವೆ...

ಈಗಲೂ ಕಾಲಚಕ್ರ ಮತ್ತೆ ತಿರುಗುವಂತಿದ್ದರೆ, ಅದೇ ಸುಂದರ ದಿನಗಳು ಬರುವಂತಿದ್ದರೆ, ಯಾವ ಭೇದಭಾವವಿಲ್ಲದೆ ಪ್ರೀತಿ, ಸಂತೋಷದಿಂದ ಒಂದೆಡೆ ಸೇರುವಂತಿದ್ದರೆ... ಅದು ಈಗ ಸಾಧ್ಯವಾಗದ ಮಾತಲ್ಲವೇ? ಹೋದವರು ಮತ್ತೆ ಬಾರರು, ಹಾಗೆಯೇ ಕಳೆದು ಹೋದ ಸಮಯವೂ ಕೂಡ! ಆದರೆ ಈ ಫೋಟೊ ಮಾತ್ರ ನನ್ನ ಪಾಲಿಗೆ ಸುಂದರ ನೆನಪಿನ ಕಾಣಿಕೆಯಾಗಿ ಕಳೆದ ದಿನಗಳ ಗುರುತಾಗಿ ಉಳಿದಿದೆ. ■